ಚುಚ್ಚಿಕೊಂಡು ಚಿಗುರುತ್ತಿತ್ತು ರಕುತ. ಹಳ್ಳದಿಣ್ಣೆಗಳ ಹೊಲದಲ್ಲಿ ಕುಂಟುತ್ತಾ, ಓಡುತ್ತಾ ಅವನ ಕಾಲಿನ ಹಿಮ್ಮಡಿ ನೋಯತೊಡಗಿತು. ಅಭ್ಯಾಸ ಇಲ್ಲ ಅಲ್ವಾ ಹೀಗೆಲ್ಲ ಎಡ್ರಾಬಿರ್ರಿಯಾಗಿ ಓಡಿ. ಆಯಾಸದಿಂದ ಓಡುತ್ತಾ ಕೊನೆಗೂ ಅವಳನ್ನು ತಲುಪಿ ಗಟ್ಟಿಯಾಗಿ ಅಪ್ಪಿಕೊಳ್ತಾನೆ ಮಾಧವ.

ಭೀಕರ ಅಲೆಗಳ ಏರಿಳಿತದ ಎರಡು ಸಮುದ್ರಗಳು ಅಪ್ಪಿಕೊಂಡಂತೆ ಕಲ್ಲೋಲ... ಹಾಗೇ ಇತ್ತು. ಏನೋ ಹೇಳಲು ಹೊರಟ ಅವಳ ತುಟಿಗಳಿಗೆ ತನ್ನ ಕೈ ಬೆರಳುಗಳನ್ನು ಅಡ್ಡವಾಗಿರಿಸಿದ 'ನಾವಿಬ್ಬರೂ ಮನೆ ತಗೊಳ್ಳೋಣ' ಅಂದ. ಅವಳು ಎಷ್ಟು ಗಟ್ಟಿಯಾಗಿ ಉಸಿರೆಳಕೊಂಡು ಬಿಟ್ಟಳು ಅಂದರೆ ಆ ಬಿಸಿಗೆ ಕನಲಿಹೋದ ಅವನು.

ಕೈಕೈ ಹಿಡಿದು ಇಬ್ಬರೂ ವಾಪಸ್ಸು ಬಂದ ಮೇಲೆ, ಓಡೋಡಿ ಬಂದ ನೆಲವನ್ನು, ಉರಿಯುತ್ತಿರುವ ಪಾದಗಳನ್ನು ನೋಡಿಕೊಂಡಾಗ, ಹೊರಗೆ ಬರಲಾಗದ... ತುಂಬಾ ಆಳಕ್ಕೆ ಇಳಿದುಹೋಗಿಬಿಟ್ಟಂತೆ ಭಯವಾಯಿತು ಮಾಧವನಿಗೆ. ಆದರೂ ಮರುಕ್ಷಣ ಭಂಡ ಧೈರ್ಯ ತಂದುಕೊಂಡಂತೆ ಮತ್ತೆ ಅವಳ ಕೈಯನ್ನು ಅದುಮಿ ಹಿಡಕೊಂಡ.

* * *

'ಅವನು ಉಳಿದವರನ್ನು ನೋಡುತ್ತಿರುವಾಗ ಜೀಸಸ್‌ನಂತೆ, ನನ್ನನ್ನು ನೋಡ್ತಿದ್ದಾಗ ಮಾತ್ರ ಗ್ರೀಕ್ ದೇವರು ಎರೋಸ್‌ನಂತೆ ಕಾಣಿಸಿದ' ಅಂತ ಪ್ರಶಾಂತಿ ಹೇಳಿದ ದಿನವೇ ಮಣಿಶಂಕರನಿಗೆ ಅನುಮಾನ ಬಂತು. ಅವಳ ಮಾತಿಗೆ ಬರಲಿಲ್ಲ ಅನುಮಾನ. ಅವಳ ವದನದಲ್ಲಿ ಗೋಚರಿಸುತ್ತಿದ್ದ ಬೆಳಕಿಗೆ. ಆಗ... ಅವನ ಎದೆ ತುಸು ನಡುಗಿದ್ದು ನಿಜ.

'ಯಾರನ್ನೋ ಹೊಗಳಿ ತನ್ನಲ್ಲಿ ಅಸೂಯೆ ತರಿಸಿ ಇನ್ನೂ ಇವಳ ಸೆರಗನ್ನು ಹಿಡಿದು ಇವಳ ಹಿಂದೆಹಿಂದೆ ಸುತ್ತಾಡಲಿಕ್ಕೆ ಬಳಸಿದ ಜಾಣತನದ ಟ್ರಿಕ್ ಮಾತಿದು' ಅಂತಂದುಕೊಂಡಾಗಲೇ ಅವನಿಗೆ ನಿರಾಳ ಉಸಿರಾಡುವಂತಾಯ್ತು. ಸಮಾಧಾನವೂ. ಆದರೆ ಇದೀಗ ಲಗೇಜ್ ಎಲ್ಲ ರೆಡಿಮಾಡಿಕೊಂಡು 'ಅವನು ನನಗೆ ತುಂಬಾನೆ ಹಿಡಿಸಿದ್ದಾನೆ, ಮನೆಯಿಂದ ಹೊರಟುಹೋಗ್ತೀನಿ' ಅಂತ ನಿಸ್ಸಂಕೋಚವಾಗಿ ಹೇಳುತ್ತಿದ್ದರೆ ಏನೊಂದೂ ಅರ್ಥವಾಗುವುದಿಲ್ಲ ಮಣಿಗೆ. ಇವಳು ಹುಚ್ಚು ಹುಡುಗಿ ಅಂತ ಅವನು ಬಲ್ಲ, ಆದರೆ ಹೀಗೆ ಹಠಾತ್ತಾಗಿ ಮನೆಯಿಂದ ಹೊರಟುಹೋಗ್ತೀನಿ ಅಂತ ಹೇಳಿ, ಲಗೇಜು ಸಮೇತ ನಿಂತದ್ದು ನೋಡಿ ಈಪಾಟಿ ಹುಚ್ಚಾ ಅಂತ ದುಗುಡಗೊಂಡು ಹೇಗೆ ಪ್ರತಿಕ್ರಿಯಿಸಬೇಕೋ ಗೊತ್ತಾಗದೇ ಚಡಪಡಿಸುತ್ತಿದ್ದಾನೆ.

ಹುಡುಗಿಯನ್ನು ನೋಡುವ ಶಾಸ್ತ್ರಕ್ಕೆ ಅಂತ ಪ್ರಶಾಂತಿಯ ಮನೆಗೆ ಹೋದ ದಿನ ನೆನಪಿಗೆ ತಾಗಿತು. ಆವತ್ತು ಪ್ರಶಾಂತಿ ಅವರ ಅಮ್ಮ, ಮಗಳ ಚೆಲುವು, ಒಳ್ಳೆಯತನ, ಬುದ್ಧಿವಂತಿಕೆ, ಪ್ರೈವೇಟ್ ಜಾಬ್ ಆದರೂ ತುಂಬು ಸಹನೆಯಿಂದ ಹೇಗೆಲ್ಲ ನಿಭಾಯಿಸುತ್ತಿದಾಳೆ ಅಂತ ಹೇಳ್ತಿದ್ದಾಗ ಅವಳ ಅಪ್ಪ ಇದ್ದಕ್ಕಿದ್ದಂತೆ ತನ್ನ ಮಾತನ್ನು ತೂರಿಸಿದ – ವೀರಗಾಥೆಯೊಂದರ ಪ್ರಾರಂಭ ವಾಕ್ಯದಂತಿತ್ತು 'ಇಂಟರ್ ಮೊದಲನೆ ವರ್ಷದಲ್ಲಿರುವಾಗ ಪ್ರಶಾಂತಿ ಮನೆಯಿಂದ ಹೋದವಳು, ಒಂದು ವಾರದ ನಂತರ ವಾಪಸ್ಸು ಬಂದಳು'.

ಬೆಚ್ಚಿಬಿದ್ದೇ ಬಿದ್ದ ಮಣಿಶಂಕರ್. ಅಷ್ಟರಲ್ಲಿ ಅವಳ ಅಮ್ಮ ಗಂಡನನ್ನು ಗದರಿಕೊಂಡಳು 'ಅದೇನು ಹೇಳ್ತೀರೋ ಅದನ್ನು ಸರಿಯಾಗಿ ಹೇಳಿ'. ಆಮೇಲೆ ಆತ ಇಡೀ ಕಥೆಯನ್ನು ಹೇಳಿದ. ಸಿನಿಮಾ ಮೇಲಿನ ಹುಚ್ಚಿನಿಂದ ಮನೆಯಿಂದ ಹೋದವಳು ಒಂದು ವಾರದ ಕಾಲ ಎಲ್ಲ ಸ್ಟುಡಿಯೋಗಳ ಸುತ್ತಲೂ ತಿರುಗಾಟ ಮಾಡಿದಳು ಟೀನೇಜ್ ಹುಡುಗಿ ಪ್ರಶಾಂತಿ. ಅವಳನ್ನು ವಂಚಿಸಲು ಯತ್ನಿಸಿದ ಒಬ್ಬರೋ ಇಬ್ಬರೋ ಗಂಡುಪ್ರಾಣಿಗಳನ್ನು ನೋಡಿ ಭಯವಾಗಿ ಮತ್ತೆ ಮನೆಗೆ ವಾಪಸ್ಸಾದಳು. ಯಾವನ ಜೊತೆಯಲ್ಲೋ ಓಡಿಹೋಗಿ ಮನೆಮರ್ಯಾದೆ ಎಲ್ಲ ಕಳೆದಳು ಅಂತ ಊರಲ್ಲೆಲ್ಲ ಗುಲ್ಲೆದ್ದರೂ ಹೊಡೆಯದೇ, ಬೈಯ್ಯದೇ ಒಂಚೂರು ಬುದ್ಧಿವಾದಂಥಾ ಮಾತು ಹೇಳಿ ಮಗಳನ್ನು ಕಾಪಾಡಿಕೊಂಡವರು. ಅಲ್ಲಿಗೆ ಅವಳಿಗೆ ಸಿನಿಮಾದ ಹುಚ್ಚು ಬಿಟ್ಹೋಯ್ತು.

'ಅವಳಪ್ಪನ ಥರಾ ಯಾವುದು ಮನಸ್ಸಿಗೆ ಹಿಡಿಸಿದರೆ ಅದು. ಇಬ್ಬರಿಗೂ ಯಾವ ಹುಚ್ಚು ಹಿಡಿದರೆ ಅದೇ. ಅಷ್ಟು ಬಿಟ್ಟರೆ ನನ್ನ ಮಗಳು ಚಿನ್ನದ ಗೊಂಬೆ ಕಣಪ್ಪಾ' ಪ್ರಶಾಂತಿಯ ಅಮ್ಮ ಹೀಗೆ ಹೇಳುವಾಗ, ಆಕೆಯ ಮಾತುಗಳ ಹಿಂದೆ ಈ ಸಂಬಂಧವೂ ಎಲ್ಲಿ